1. ಪ್ರಶ್ನೋತ್ತರಗಳು

ಅ. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ. ಗೋಪಾಲಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಆತಂಕ ಪ್ರತಿ ವರ್ಷ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗುವ ಕುರಿತದ್ದಾಗಿದೆ. ಇಡೀ ರಾಜ್ಯದ ಗ್ರಾಮೀಣ ಭಾಗಗಳಲ್ಲಿ ರೈತರಿಗೆ ಮತ್ತು ದನಕರುಗಳಿಗೆ ಕುಡಿಯುವ ನೀರಿಗೆ .. ..

ಅಧ್ಯಕ್ಷರು:– ಈಗ ವಿದ್ಯಾರ್ಥಿಗಳನ್ನು ಕುರಿತು ಉತ್ತರವನ್ನು ಹೇಳಿದ್ದಾರೆ. ಅದರಲ್ಲಿ ಏನು ಕೊರತೆ ಇದೆಯೆಂಬುದನ್ನು specific ಆಗಿ ಕೇಳಿ.

ಶ್ರೀ ಕೆ. ಗೋಪಾಲಯ್ಯ:– ಮಾನ್ಯ ಅಧ್ಯಕ್ಷರೆ, ಈಗ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯವಾಗಿದ್ದು, ಅವರಿಗೆ ಅನಾನುಕೂಲವಾಗದ ರೀತಿಯಲ್ಲಿ ಇಡೀ ರಾಜ್ಯಕ್ಕೆ ವಿದ್ಯುತ್ ಕೊಡುವುದಕ್ಕೆ ಸರ್ಕಾರ ಒತ್ತನ್ನು ಕೊಡಬೇಕು. ಇದರ ಜೊತೆಗೆ ಗ್ರಾಮೀಣ ಭಾಗಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ .. .

ಅಧ್ಯಕ್ಷರು:– ಭಾಷಣ ಬೇಡ, ಪ್ರಶ್ನೆ ಕೇಳಿ.

ಶ್ರೀ ಕೆ. ಗೋಪಾಲಯ್ಯ:– ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲೂ ಸಹ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದೆ. ಅದಕ್ಕಾಗಿ ನಿರಂತರ ವಿದ್ಯುತ್ ಅನ್ನು ಕೊಡಬೇಕು.

ಅಧ್ಯಕ್ಷರು:– ಆ ವಿಷಯವನ್ನು separate ಆಗಿ ಚರ್ಚೆಗೆ ಹಾಕಿಕೊಳ್ಳಿ, ಆಗ ಚರ್ಚೆ ಮಾಡೋಣ. ಮಾನ್ಯ ಮಂತ್ರಿಯವರೆ, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಉತ್ತರ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ದೀರ್ಘವಾಗಿ ಅಧ್ಯಯನ ಮಾಡಿ ಧೀರ್ಘವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಎಷ್ಟು ವಿದ್ಯುತ್ ಕೊರತೆ ಇದೆ? ಎಂಬುದನ್ನೆಲ್ಲಾ ಕೇಳಿದ್ದಾರೆ. ಮಾನ್ಯ ಸದಸ್ಯರು ಏಪ್ರಿಲ್ ತಿಂಗಳವರೆಗೂ ಏನಾಗಬಹುದೆಂದು ಕೇಳಿದ್ದಾರೆ. ಈಗಾಗಲೇ 1400 ಮೆ.ವ್ಯಾ.ನಷ್ಟು ವಿದ್ಯುತ್ ಕೊರತೆ ಇದೆ. ನಾವು ಟೈಮ್‌ನಲ್ಲಿ ಅದನ್ನು manage ಮಾಡುತ್ತಿದ್ದೇವೆಂದು ಹೇಳಿದ್ದೇವೆ. ಏಪ್ರಿಲ್‌ನವರೆಗೆ 800 ಮೆ.ವ್ಯಾ. ವಿದ್ಯುತ್ ಕೊರತೆಯಾಗಬಹುದೆಂಬ estimate ಮಾಡಲಾಗಿದೆ ಎಂದು ಹೇಳಿದ್ದೇನೆ. ಆದರೆ ವಿದ್ಯಾರ್ಥಿಗಳಿಗೆ ಏನೂ ತೊಂದರೆಯಾಗದಂತೆ, ಎಲ್ಲಾ ಕ್ರಮಗಳನ್ನು ಈಗಾಗಲೇ ನಾವು ಕೈಗೊಂಡಿದ್ದೇವೆ. ಇದರ ಜೊತೆಗೆ ಈಗಾಗಲೇ ರಾಜ್ಯದಲ್ಲಿ ನಾವು ಘೋಷಣೆ ಮಾಡಿದಂತೆ ನಗರದಲ್ಲಿ 22 ರಿಂದ 24 ಗಂಟೆಗಳು, ಗ್ರಾಮೀಣ ಪ್ರದೇಶಗಳಲ್ಲಿ 7 ಗಂಟೆಗಳು three phase ನಲ್ಲಿ ವಿದ್ಯುತ್ ಪೂರೈಸುತ್ತಿದ್ದೇವೆ. ಎರಡು ಬ್ಯಾಚ್‌ನಲ್ಲಿ ಸರಬರಾಜು ಮಾಡುತ್ತಿದ್ದೇವೆ. ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ single phase ನಲ್ಲಿ ಸರಬರಾಜು ಮಾಡಲು ಕ್ರಮ ಕೈಗೊಂಡಿದ್ದೇವೆ. ಮುಂಜಾಗ್ರತೆಯಾಗಿ ಖಾಸಗಿಯವರ ಹತ್ತಿರ purchase ಮಾಡುವಂಥದ್ದು, ಕೇಂದ್ರ ಸರ್ಕಾರದ ಮೊರೆ ಹೋಗುವಂಥದ್ದು ಮುಂತಾದ ಕ್ರಮ ಕೈಗೊಂಡಿದ್ದೇವೆ. ಈಗ ಹೆಚ್ಚು–ಕಡಿಮೆ ಸಮಸ್ಯೆಯನ್ನು ಸ್ವಲ್ಪ ನಿಯಂತ್ರಣಕ್ಕೆ ತಂದಿದ್ದೇವೆ. ಬಹುಶಃ ಈ ಜೂನ್ ತಿಂಗಳವರೆಗೂ ಬಹಳ ಕ್ಲಿಷ್ಟಕರ ಪರಿಸ್ಥಿತಿ ಇರುತ್ತದೆ, ಆದರೂ ಕೂಡ ಇದನ್ನು ನಿಭಾಯಿಸುತ್ತೇವೆ. ತಾವೆಲ್ಲಾ ಇದಕ್ಕೆ ಸಹಕಾರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಮತ್ತೆ ಏನೇ ವಿಚಾರಗಳಿದ್ದರೂ ಕೂಡ ವಿದ್ಯಾರ್ಥಿಗಳಿಗೆ ತೊಂದರೆಯಾಗದ ಹಾಗೆ ಕಾಪಾಡುತ್ತೇವೆ.

ಅಧ್ಯಕ್ಷರು:– Ok. ಮಾನ್ಯ ರಾಜೀವ್‌ರವರೆ, ತಮ್ಮ ಪ್ರಶ್ನೆ ಬಹಳ ದೊಡ್ಡದಿದೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು:– ಕೊಟ್ಟಿದ್ದಾರೆ, ತಾವು ಪ್ರಶ್ನೆ ಕೇಳಿ.

ಜಮೀನುಗಳಿಗೆ ಸಮರ್ಪಕ ನೀರು ಪೂರೈಸುವುದು

47(1281); ಶ್ರೀ ರಾಜೀವ್ ಪಿ. (ಕುಡಚಿ)

ಅ) 2012–13 ಮತ್ತು 2013–14ನೇ ಸಾಲಿನಲ್ಲಿ .ರಾಯಭಾಗ ತಾಲ್ಲೂಕಿನ ಎಷ್ಟು ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆಯನ್ನು ಕೈಗೊಳ್ಳಲಾಗಿದೆ;

ಆ) ಈ ಪ್ರದೇಶದಲ್ಲಿ ಬೆಳೆದಿರುವ ಪ್ರಮುಖ ಬೆಳೆಗಳು ಯಾವುವು; (ಎಕರೆವಾರು ವಿವರ ಒದಗಿಸುವುದು)

ಇ) ಈ ಪ್ರದೇಶದಲ್ಲಿ ಬೆಳೆದಿರುವ ಪ್ರಮುಖ ರಬ್ಬಿ ಹಾಗೂ ಖಾರಿಫ್ ಬೆಳೆಗಳೆಷ್ಟು (ವಿವರ ನೀಡುವುದು)

ಈ) ಈ ಭಾಗದ ಎಷ್ಟು ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ;

ಉ) ಕೃಷಿ ಹಾಗೂ ನೀರಾವರಿ ಇಲಾಖೆಗಳಲ್ಲಿ ಸಮನ್ವಯತೆ ಇಲ್ಲದಿರುವುದರಿಂದ, ರಬ್ಬಿ ಮತ್ತು ಖಾರಿಫ್ ಬೆಳೆಗಳಿಗೆ ಸಮರ್ಪಕವಾಗಿ ನೀರು ಹಂಚಿಕೆಯಾಗದೇ ಬೆಳೆ ನಾಶ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ನೀರಾವರಿ ಇಲಾಖೆಯಿಂದ ಬರಡುಭೂಮಿ ಎಂದು ಘೋಷಿತವಾದ ಪ್ರದೇಶದಲ್ಲಿ ಹೇರಳವಾಗಿ ಕಬ್ಬು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಪ್ರದೇಶದಲ್ಲಿ ಬೆಳೆಯುವ ಬೆಳೆಗಳಿಗೆ ಸಮರ್ಪಕವಾಗಿ ನೀರನ್ನು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೃಷ್ಣ ಬೈರೇಗೌಡ ಕೃಷಿ ರಾಜ್ಯ ಸಚಿವರು

ಅ) ರಾಯಭಾಗ ತಾಲ್ಲೂಕಿನಲ್ಲಿ 2012–13ನೇ ಸಾಲಿನಲ್ಲಿ 1,64,774 ಎಕರೆ ಮತ್ತು 2013–14ನೇ ಸಾಲಿನಲ್ಲಿ 1,57,465 ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆಯನ್ನು ಕೈಗೊಳ್ಳಲಾಗಿದೆ.